# ಮಾನವ ಜನ್ಮ ದೊಡ್ಡದು

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
4. **Note:** Lyrics given without highlights are as per Ref. 2. These lyrics are same as in Ref. 3 except few wordings, which are given in yellow highlights. The lyrics in Ref. 1 are slightly different and are given separately in green highlights.
5. **Note:** Singer has followed the lyrics as in Ref. 2.
6. **Note:** Here, in this website, only one pravachana can be uploaded. Other parts of pravachanas of Sant Bhadragiri Achyutadas can be viewed through the following links: Part 2 – https://www.youtube.com/watch?v=JTC_yrBNrXg&t=113s

ರಾಗ: ರೇಗುಪ್ತಿ (ಪಂತುವರಾಳಿ) ತಾಳ: ಅಟ್ಟ

| | |
|---|---|
| ಮಾನವ ಜನ್ಮ ದೊಡ್ಡದು | ಮಾನವ ಜನ್ಮ ದೊಡ್ಡದು |
| ಇದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ ॥ ಪ ॥ | ಇದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ |
| | |
| ಕಣ್ಣು ಕೈ ಕಾಲ್ ಕಿವಿ ನಾಲಿಗೆ ಇರಲಿಕ್ಕೆ | ಕಣ್ಣು ಕೈ ಕಾಲ್ ಕಿವಿ ನಾಲಿಗೆ ಇರಲಿಕ್ಕೆ |
| ಮಣ್ಣು ಮುಕ್ಕಿ ಹುಚ್ಚರಾಗುವರೆ (ಮರುಳಾಗುವರೆ) | ಮಣ್ಣು ಮುಕ್ಕಿ ಮರುಳಾಗುವರೆ |
| ಹೆಣ್ಣು ಮಣ್ಣಿಗಾಗಿ ಹರಿಯ ನಾಮಾಮೃತ | ಹೊನ್ನು ಹೆಣ್ಣಿಗಾಗಿ ಹರಿ ನಾಮಾಮೃತವನು |
| ಉಣ್ಣದೆ ಉಪವಾಸ ಇರುವರೆ ಖೋಡಿ ॥ 1 ॥ | ಉಣ್ಣದೆ ಉಪವಾಸವಿರುವರೇನೋ |
| | |
| ಕಾಲನ ಧೂತರು ಕಾಲ್ಪಿಡಿದೆಳೆವಾಗ | ಕಾಲನವರು ಬಂದು ಕರಪಿಡಿದೆಳೆವಾಗ |
| ತಾಳು ತಾಳೆಂದರೆ ತಾಳುವರೆ | ತಾಳು ತಾಳೆಂದರೆ ಕೇಳುವರೆ |
| ಧಾಳಿ ಬಾರದ ಮುನ್ನ ಧರ್ಮವ ಗಳಿಸಿರೊ | ವೇಳೆ ಹೋಗದ ಮುನ್ನ ಧರ್ಮವ ಗಳಿಸಿರೊ |
| (ಸುಳ್ಳಿನ) (ಹಾಳು) ಸಂಸಾರ ಸುಳಿಗೆ ಸಿಕ್ಕಲು ಬೇಡಿ ॥ 2 ॥ | ಸುಳ್ಳಿನ ಸಂಸಾರ ಸುಳಿಗೆ ಸಿಲುಕ ಬೇಡಿ |
| | |
| ಏನು ಕಾರಣ ಯದುಪತಿಯನು ಮರೆತಿರಿ | ಏನು ಕಾರಣ ಯದುಪತಿಯನು ಮರೆತಿರಿ |
| ಧನ ಧಾನ್ಯ (ಪುತ್ರರು) (ಸತಿ ಸುತರು) ಕಾಯುವರೆ | ಧಾನ್ಯ ಧನ ಸತಿ ಸುತರಿವು ನಿತ್ಯವೆ |
| ಇನ್ನಾದರು ಏಕೋ ಭಾವದಿ ಭಜಿಸಿರೊ | ಇನ್ನಾದರು ಶ್ರೀ ಪುರಂದರ ವಿಠಲನ |
| ಚನ್ನ ಶ್ರೀ ಪುರಂದರ ವಿಠಲರಾಯನ ॥ 3 ॥ | ಚೆನ್ನಾಗಿ ಭಜಿಸಿ ನೀವ್ ಸುಖಿಯಾಗಿರಯ್ಯ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಬದುಕನ್ನು ಗಾಢವಾಗಿ ಪ್ರೀತಿಸುವ ಸಮಾಜ ಚಿಂತಕರಿಗೆ ಆ ಬದುಕಿನ ಸುತ್ತಣ ಪೊಳ್ಳುಗಳತ್ತ ಬೆರಳು ಮಾಡಬೇಕೆನ್ನಿಸುವುದೂ ಸಹಜ. "ಧಾಳಿ ಬಾರದ ಮುನ್ನ ಧರ್ಮವ ಗಳಿಸಿರೊ" ಎಂಬ ಮಾತು ದೇಹದ ಮೇಲೆ ಮನಸ್ಸಿನ ಧಾಳಿ ಆಗಾಗ ನಡೆಯುತ್ತಿರುತ್ತದೆನ್ನುವ ಪೂರ್ವಸೂಚನೆಯನ್ನೂ ಎರಚುತ್ತದೆ.

ವಿವೇಕದಿಂದ ಬದುಕಿದರೆ ಮಾನವ ಜನ್ಮದಂತಹ ಸಾಧನ ಯೋಗ್ಯ ಜೀವನವು ಇನ್ನೊಂದಿಲ್ಲವೆಂದು ದಾಸರು ಹೇಳಿದ್ದಾರೆ.

**ಮಣ್ಣು ಮುಕ್ಕು** = ವಿಷಯ ವಾಸನೆಯಿಂದ ಹಾಳಾಗು

**ಹರಿನಾಮಾಮೃತವನು ಉಣ್ಣು** = ಹರಿನಾಮವನ್ನು ಸ್ಮರಿಸು

**ವೇಳೆ** = ಆಯುಷ್ಯ

**ಯದುಪತಿ** = ಕೃಷ್ಣ

**Classification:** Keerthane
**Ankita:** purandara vittala
**Location:** NA
**Category:** Jeevanoddhara, Jeevana Sutra.
**Sub-Category:** janma, nara, huchha, kannu, nalige, kai, kivi, bangara, hengasu, Krishna, upavasa, oota, yama, Dhyana, dhrma, rokka, patni, bhajane, sukha,
**Pravachana:** Sant Bhadragiri Achyutadas
**Explanation:** NA